# ಕರ್ನಾಟಕ ವಿಧಾನ ಪರಿಷತ್ತು
## ಲಘು ಪ್ರಕಟಣೆ ಭಾಗ-2

## (ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)
**ಶುಕ್ರವಾರ, ದಿನಾಂಕ: 27ನೇ ಜನವರಿ, 2017**

**ಸಂಖ್ಯೆ: 05**

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖಾ ನಿರ್ದೇಶನಾಲಯದ ವತಿಯಿಂದ, ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ಮಾನ್ಯ ಸದಸ್ಯರುಗಳಿಗೆ ಬೆಳಗಾವಿಯ ಈ ಹಿಂದಿನ ಅಧಿವೇಶನದಲ್ಲಿ ನೀಡಿದ್ದ ಭರವಸೆಯಂತೆ ದಿನಾಂಕ: 03.02.2017 ಮತ್ತು 04.02.2017ಗಳಂದು ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮೈಸೂರಿನ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು, ಮೈಸೂರಿನ ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು, ಇಲ್ಲಿ ಕಾರ್ಯಾಗಾರ (ತರಬೇತಿ)ವನ್ನು ಏರ್ಪಡಿಸಲಾಗಿದ್ದು, ಸದರಿ ಕಾರ್ಯಾಗಾರ (ತರಬೇತಿ)ದಲ್ಲಿ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು ಹಾಜರಾಗುವಂತೆ ಕೋರಿರುತ್ತಾರೆ. ಸದರಿ ಪತ್ರಗಳನ್ನು ಲಗತ್ತಿಸಲಾಗಿದೆ.

ಆದುದರಿಂದ, ದಿನಾಂಕ: 03.02.2017 ಮತ್ತು 04.02.2017ಗಳಂದು ಮೈಸೂರಿನ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಹಾಗೂ ಪಂಚಾಯತ್ ರಾಜ್ ಸಂಸ್ಥೆಯು, ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮೈಸೂರಿನ ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಇಲ್ಲಿ ಆಯೋಜಿಸಿರುವ ಕಾರ್ಯಾಗಾರ (ತರಬೇತಿ)ದಲ್ಲಿ ಹಾಜರಾಗುವ ಮೂಲಕ ಸದರಿ ಕಾರ್ಯಾಗಾರದ ಸದುಪಯೋಗ ಪಡೆದುಕೊಳ್ಳಬೇಕೆಂದು ಈ ಮೂಲಕ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳನ್ನು ಕೋರಲಾಗಿದೆ. ಮಾನ್ಯ ಸದಸ್ಯರುಗಳಿಗೆ ಮೇಲ್ಕಂಡ ಆಡಳಿತ ತರಬೇತಿ ಸಂಸ್ಥೆಯ ವತಿಯಿಂದ ವಸತಿ ಹಾಗೂ ಊಟದ ವ್ಯವಸ್ಥೆಯನ್ನು ಸಹ ಏರ್ಪಡಿಸಿರುತ್ತಾರೆ. ತರಬೇತಿ ಬಗ್ಗೆ ಮಾನ್ಯ ಸದಸ್ಯರು ಹೆಚ್ಚಿನ ಯಾವುದೇ ಮಾಹಿತಿಗಾಗಿ ಮೇಲ್ಕಂಡ ಸಂಸ್ಥೆಯ ಉಪ ನಿರ್ದೇಶಕರ ದೂರವಾಣಿ ಸಂಖ್ಯೆ: 94808 50117 ಹಾಗೂ 0821-2522906 ಗಳಿಗೆ ಸಂಪರ್ಕಿಸಬಹುದು.

ಶ್ರೀನಿವಾಸ
ಕಾರ್ಯದರ್ಶಿ

*ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ:*

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 31 ಜಿಪಸ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:27-01-2017.

**ಇವರಿಂದ:**

**ಸರ್ಕಾರದ ಪ್ರಧಾನ ಕಾರ್ಯದರ್ಶಿ** (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

**ಕಾರ್ಯದರ್ಶಿಗಳು,**
ಕರ್ನಾಟಕ ವಿಧಾನ ಪರಿಷತ್,
ವಿಧಾನ ಸೌಧ,
**ಬೆಂಗಳೂರು.**

**ಮಾನ್ಯರೆ,**

ವಿಷಯ: ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು, ಇಲ್ಲಿ ದಿನಾಂಕ:03-02-2017 & 04-02-2017 ರಂದು ತರಬೇತಿಯನ್ನು ಆಯೋಜಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಳಗಾವಿ ವಿಧಾನ ಮಂಡಲದ ಅಧಿವೇಶನದಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳ ಪ್ರಶ್ನೆಗೆ ಉತ್ತರಿಸುತ್ತಾ, ಗ್ರಾಮೀಣ ಸ್ಥಳೀಯ ನಿಕಾಯಗಳಿಂದ ಚುನಾಯಿತ ಸದಸ್ಯರುಗಳಿಗೆ ಗ್ರಾಮೀಣಾಭಿವೃದ್ಧಿ ಇಲಾಖೆ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮದ ಕುರಿತು ಎರಡು ದಿನದ ಕಾರ್ಯಾಗಾರ ಹಮ್ಮಿಕೊಳ್ಳುವುದಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಭರವಸೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ದಿನಾಂಕ:03-02-2017 ಮತ್ತು 04-02-2017ರಂದು (ಎರಡು ದಿನಗಳು) ಎಲ್ಲಾ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ಕಾರ್ಯಾಗಾರವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು ಇಲ್ಲಿ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ ಹಾಗೂ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಈ ಕೆಳಕಂಡ ಸ್ಥಳಗಳಲ್ಲಿ ಏರ್ಪಡಿಸಲಾಗಿದೆ.

**ವಸತಿ ವ್ಯವಸ್ಥೆ:** ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.

**ಊಟದ ವ್ಯವಸ್ಥೆ:** ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.

ಸದರಿ ತರಬೇತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸುವಂತೆ ಕೋರಿದೆ.

1. ಶ್ರೀ ಗಣೇಶ್ ಪ್ರಸಾದ್, ಉಪನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು. (ಮೊ-9480850117, ಕಛೇರಿ ದೂರವಾಣಿ ಸಂಖ್ಯೆ:0821-2522906)
2. ಶ್ರೀ ಮಲ್ಲಿಕಾರ್ಜುನ, ಬೋಧಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು. (ಮೊಬೈಲ್-9480850104)
3. ಡಾ: ಸುದರ್ಶನ್, ಬೋಧಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು. (ಮೊಬೈಲ್-9480850102)

ತಮ್ಮ ವಿಶ್ವಾಸಿ,

27/1/2017
(ಪಿ.ದೇವಸಹಾಯರ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
27.1.17

**ಪ್ರತಿಯನ್ನು:**

ಕೆ. ಯಾಲಕ್ಕಿಗೌಡ
ನಿರ್ದೇಶಕರು (ಪಂಚಾಯತ್ ರಾಜ್-2)
K. YALAKKI GOWDA
Director (Panchayat Raj-2)

ಕರ್ನಾಟಕ ಸರ್ಕಾರದ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾ
Karnataka Government Secretariat
Rural Development & Panchayat Raj

**ಸಂಖ್ಯೆ: ಗ್ರಾಅಪ 31 ಜಿಪಸ 2017** **ದಿನಾಂಕ:21-01-2017**

ಮಾನ್ಯರೆ,

ವಿಷಯ: ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದ ವಿಧಾನ ಪರಿಷತ್ತು ಸದಸ್ಯರುಗಳಿಗೆ ತರಬೇತಿ ಆಯೋಜಿಸುವ ಕುರಿತು.

******

ಬೆಳಗಾವಿ ವಿಧಾನ ಮಂಡಲದ ಅಧಿವೇಶನದಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳ ಪ್ರಶ್ನೆಗೆ ಉತ್ತರಿಸುತ್ತಾ, ಗ್ರಾಮೀಣ ಸ್ಥಳೀಯ ನಿಕಾಯಗಳಿಂದ ಚುನಾಯಿತ ಸದಸ್ಯರುಗಳಿಗೆ ಗ್ರಾಮೀಣಾಭಿವೃದ್ಧಿ ಇಲಾಖೆ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮದ ಕುರಿತು ಎರಡು ದಿನದ ಕಾರ್ಯಾಗಾರ ಹಮ್ಮಿಕೊಳ್ಳುವುದಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಭರವಸೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ದಿನಾಂಕ:03-02-2017 ಮತ್ತು 04-02-2017ರಂದು (ಎರಡು ದಿನಗಳು) ಎಲ್ಲಾ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಿಗೆ ಕಾರ್ಯಗಾರವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು ಇಲ್ಲಿ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಆದ್ದರಿಂದ ಸದರಿ ತರಬೇತಿಗೆ ಎಲ್ಲಾ ಮಾನ್ಯ ವಿಧಾನ ಪರಿಷತ್ತು ಸದಸ್ಯರುಗಳು ಹಾಜರಾಗುವಂತೆ ವಿನಂತಿಸಲು ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

21/1/17

**ಕಾರ್ಯದರ್ಶಿಗಳು,**
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಸೌಧ,
**ಬೆಂಗಳೂರು.**

ಸಭಾಪತಿ
ದಿನಾಂಕ 21/1/2017
ಕರ್ನಾಟಕ ವಿಧಾನ ಪರಿಷತ್ತು

ಬಹುಮಹಡಿ ಕಟ್ಟಡ, 3ನೇ ಮಹಡಿ, ಬೆಂಗಳೂರು – 560 001 M.S. Building, 3rd Floor, Bengaluru - 560 001
Tele : 080-22357202 / 22032523 Fax : 080-22357202 e-mail : pr.kar@nic.in